**ಅಸಲು ದಾವ ಸಂಖ್ಯೆಃ 1125/2017**

**ಪಿ ಡಬ್ಲೂ -1**

**ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

**ದಿಃ 27-01-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ ಸಿ ಜಿ, ಪ್ರತಿವಾದಿ 1 ರವರ ಪರ ವಕೀಲರಿಂದ.**

1. ನನಗೆ 89 ವರ್ಷ ವಯಸ್ಸಾಗಿರುತ್ತದೆ. ನಾನು ಮೂಲತಃ ಆಂಧ್ರಪ್ರದೇಶದ ವಾಸಿಯಾಗಿರುತ್ತೇನೆ. ನನಗೆ ಬೆಳಗಾವಿಯಲ್ಲಿ ಯಾರು ಸಂಬಂಧಿಕರು ಇರುವುದಿಲ್ಲ. ನಾನು 11 ನೇ ಜೂನ್ 1984 ರಲ್ಲಿ ಬೆಳಗಾವಿಗೆ ಬಂದಿರುತ್ತೇನೆ. ನಾನು ಸರ್ಕಾರಿ ಬಿ. ಇಡ್ ಕಾಲೇಜಿನಲ್ಲಿ ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ಜುಲೈ 1992 ರಲ್ಲಿ ನಿವೃತ್ತಿ ಹೊಂದಿದ್ದೇನೆ. 1992 ರಿಂದ ನನ್ನ ಮಾನಸಿಕ ಸ್ಥಿತಿ ಮಧ್ಯದಲ್ಲಿ 2 ವರ್ಷ ಸರಿ ಇರಲಿಲ್ಲ ಮತ್ತು ಈಗ ಸರಿಯಾಗಿರುತ್ತದೆ. 2006 ರಿಂದ 2008 ರವರೆಗೆ ನನ್ನ ಮಾನಸಿಕ ಸ್ಥಿತಿ ಸರಿಯಾಗಿರಲಿಲ್ಲ. ಅದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ರೀತಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ . 2005 ನೇ ಇಸವಿಯಿಂದ ನನಗೆ ಪ್ರತಿವಾದಿ ನಂ. 1 ಇವರ ಪರಿಚಯ ಇರುತ್ತದೆ. ನಾನು ನನ್ನ ನಿವೃತ್ತಿ ನಂತರ ಮಾನಸ ಲಹರಿ ಮಾಹಿಳಾ ಮಂಡಳ ಎಂಬ ನೊಂದಾಯಿತ ಮಹಿಳಾ ಸಂಘವನ್ನು ನಡೆಸುತ್ತಿದ್ದೆ. ಮಾನಸ ಲಹರಿ ಮಾಹಿಳಾ ಮಂಡಳ ಇದು 1990 ರಲ್ಲಿ ನೊಂದಾವಣೆಯಾಗಿರುತ್ತದೆ. ನೊಂದಾವಣೆಯಾದ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ. ಪ್ರತಿವಾದಿ ನಂ. 1 ಇವರು ಮೊದಲು ಅಶೋಕ ನಗರದಲ್ಲಿ ಪ್ರಾಕ್ಟಿಸ್ ಮಾಡುತ್ತಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅವರು ಅಶೋಕ ನಗರದಲ್ಲಿ ಪ್ರಾಕ್ಟಿಸ್ ಮಾಡುತ್ತಿದ್ದರು ನಾನೇ ಅವರನ್ನು ಮಾನಸ ಲಹರಿ ಮಾಹಿಳಾ ಮಂಡಳ ಇದಕ್ಕೆ ಅನುಕೂಲವಾಗುವ ಸಲುವಾಗಿ ದಾವಾ ಆಸ್ತಿಯನ್ನು ಅವರಿಗೆ ಬಾಡಿಗೆ ನೀಡಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿ 1 ಇವರು

ಬಂದು ಕೇಳಿದ್ದರಿಂದ ನಾನು ದಾವಾ ಆಸ್ತಿಯನ್ನು ಬಾಡಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ಇವರು ಮೊದಲಿಗೆ ಸರಿಯಾಗಿ ಬಾಡಿಗೆ ನೀಡಿದ್ದು, ಆದರೆ ತದನಂತರ ಅವರು ಸರಿಯಾಗಿ ಬಾಡಿಗೆ ನೀಡಿರುವುದಿಲ್ಲ. ಅದರ ಬಗ್ಗೆ ದಿನಾಂಕವನ್ನು ನನಗೆ ಹೇಳಲು ನೆನಪಿರುವುದಿಲ್ಲ. ಪ್ರತಿವಾದಿ ನಂ. 1 ಇವರನ್ನು ನಾನು ದಾವಾ ಆಸ್ತಿಯಿಂದ ಹೊರಹಾಕಲು ನೋಡಿದಾಗ ಪ್ರತಿವಾದಿ ನಂ. 1 ಇವರು ನನ್ನ ವಿರುದ್ಧ ಮನಾಯಿ ದಾವೆ ಓ ಎಸ್ ನಂ. 486/2007 ನ್ನು ದಾಖಲು ಮಾಡಿದ್ದರು ಎಂದರೆ ಸರಿ. ಆ ದಾವೆಯು ಪ್ರತಿವಾದಿ 1 ರವರ ಪ್ರಕಾರ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಓ ಎಸ್ ನಂ. 486/2007 ಇರದಲ್ಲಿ ಖೋತ ವಕೀಲರ ಮುಖಾಂತರ ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 2 ಮತ್ತು ಪ್ರತಿವಾದಿ ನಂ. 1 ಇವರು ಸೇರಿಕೊಂಡು ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಓ ಎಸ್ ನಂ. 486/2007 ರ ತಕರಾರು ಅರ್ಜಿಯನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ಗುರುತಿಸಿದ್ದು, ಆದರೆ ಅದನ್ನು ನನಗೆ ಅರ್ಜಂಟ ಬೇಕಾಗಿದೆ ಎಂದು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ತಕರಾರಿನ ಪ್ಯಾರಾ ನಂ. 3 ರಲ್ಲಿ ದಾವಾ ಆಸ್ತಿಯನ್ನು ನಾನು ಪ್ರತಿವಾದಿ ನಂ. 2 ಇವರಿಗೆ ಮಾರಿದ್ದೇನೆ ಎಂದು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಮತ್ತು 1600/- ರೂ. ಗಳಿಗೆ ಬಾಡಿಗೆ ನೀಡಿದ್ದೇನೆ ಎಂದರೆ ಸಾಕ್ಷಿಯು ಅವರು ಕೆಲವು ದಿನಗಳವರೆಗೆ ನನಗೆ ಬಾಡಿಗೆ ನೀಡಿದ್ದರು ಎಂದು ನುಡಿಯುತ್ತಾರೆ. ಓ ಎಸ್ ನಂ. 486/2007 ರ ಡಿಕ್ರಿಯ ಮೇಲೆ ನಾನು ಆರ್ ಎ ನಂ. 1060/2009 ಎಂದು ಮೇಲ್ಮನವಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ ನಾವು ಯಾರೂ ಹಾಜರಿರದ ಕಾರಣ ಮೇಲ್ಮಣವಿ 05.10.2013 ರಂದು ವಜಾ ಆಯಿತು ಎಂದರೆ ನನಗೆ ತಿಳಿದಿಲ್ಲ. ಆದ್ದರಿಂದ ಓ ಎಸ್ ನಂ. 486/2007 ರ ಪ್ರಕಾರ ಡಿಕ್ರಿಯು ನನ್ನ ಮೇಲೆ ಇಲ್ಲಿಯವರೆಗೆ

ಬಂಧನಕಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ತಿಳಿಯದೇ ಡಿಕ್ರಿ ಪಡೆದಿದ್ದರೂ ಮತ್ತು ನನ್ನ ಸಹಿಯನ್ನು ಪಡೆದಿದ್ದರೂ ನಾನು ಯಾವುದೇ ರೀತಿ ಪೋಲಿಸ್ ಕಂಪ್ಲೆಂಟ ನ್ನು ನೀಡಿಲ್ಲ ಎಂದರೆ ನನಗೆ ಗೊತ್ತಿರದ ಕಾರಣ ನಾನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. 2007 ರಲ್ಲಿ ಪ್ರತಿವಾದಿ ನಂ. 2 ಇವರು ಪ್ರತಿವಾದಿ ನಂ. 1 ರವರ ವಿರುದ್ಧ ದಾವಾ ನಂ. 576/2007 ಎಂದು ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿದಾವೆಯಲ್ಲಿ ನಾನು ದಾವಾ ನಂ. 576/2007 ರಲ್ಲಿ ಆದ ಕಾಂಪ್ರಮೈಜ್ ಡಿಕ್ರಿ ನನ್ನ ಮೇಲೆ ಬಂಧನಕಾರಿ ಅಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನನಗೆ ಎಲ್ಲ ಮಾಹಿತಿ ಗೊತ್ತಿದ್ದು ನನಗೆ ಏನೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ನಂ. 576/2007 ರ ಕಾಂಪ್ರಮೆಜ್ ಡಿಕ್ರಿಯ ಪ್ರಕಾರ ಪ್ರತಿವಾದಿ ನಂ. 2 ಇವರು ಪ್ರತಿವಾದಿ ನಂ. 1 ಇವರಿಗೆ ದಾವಾ ಆಸ್ತಿಯನ್ನು ಬಿಟ್ಟುಕೊಟ್ಟಿದ್ದು ಆದರೆ ಬೇರೆಯಾರೂ ಬಾಡಿಗೆ ಬರದ ಕಾರಣ ಪ್ರತಿವಾದಿ ನಂ. 1 ಇವರಿಗೆ ಬಾಡಿಗೆಯಲ್ಲಿ ಮುಂದುವರೆದುಕೊಂಡು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ನಂ. 1 ಮತ್ತು 2 ಇವರು ಕೂಡಿಕೊಂಡು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ನನಗೆ ಆ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ . ಹೊಸ ದಾಖಲೆ ಪ್ರಕಾರ ಪ್ರತಿವಾದಿ ನಂ. 1 ಇವರು ಪ್ರತಿವಾದಿ ನಂ. 2 ಇವರಿಗೆ ಬಾಡಿಗೆ ನೀಡುತ್ತಿದ್ದರು ಎಂದರೆ ಅದು ಎಲ್ಲಾ ಸುಳ್ಳು ಅವರೇ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ . ಇದಾದ ನಂತರ ನಾನು ಪ್ರತಿವಾದಿ ನಂ. 2 ಇವರ ವಿರುದ್ದ 156/2012 ಎಂದು ಮಾಡಿದ್ದೇನೆ ಎಂದರೆ ಸರಿ. ಈ ದಾವೆಯನ್ನು ಖರೀದಿ ಮಾಡಿದ 5-6 ವರ್ಷಗಳ ನಂತರ ಮಾಡಿದ್ದೇನೆ ಸಾಕ್ಷಿ ಕಾನೂನಿನ ಪ್ರಕಾರ ಸರಿಯಾದ ಸಮಯದಲ್ಲೇ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯ ಡಿಕ್ರಿಯ ವಿರುದ್ಧ ಮೇಲ್ಮನವಿ 203/2017 ಇನ್ನೂ ಚಾಲ್ತಿಯಲ್ಲಿರುತ್ತದೆ. ಆದ ಕಾರಣ

**ಅಸಲು ದಾವ ಸಂಖ್ಯೆಃ 1125/2017**
**ಪಿ ಡಬ್ಲ್ಯೂ -1**

ಈ ಸದರಿ ದಾವೆಯನ್ನು ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ . ದಾವಾ ಆಸ್ತಿಯಲ್ಲಿ ಪ್ರತಿವಾದಿ ನಂ. 1 ಇವರ ಹೆಂಡತಿಯೂ ಸಹ ಪ್ರಾಕ್ಟಿಸ್ ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ. 1 ಇವರು ಕಾರ್ಪೋರೇಟರ್ ಎಂದು ಆಯ್ಕೆಯಾಗಿದ್ದಾರೆ ಎಂದರೆ ಸರಿ. ದಾವಾ ಆಸ್ತಿ ಇರುವ ಜಾಗದಲ್ಲಿ ಕೂಲಿ ಕಾರ್ಮಿಕರು ವಾಸ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ. 1 ಇವರು ಬಡವರಿಗೆ ಉಪಯೋಗವಾಗುವಂತಹ ಮೆಡಿಕಲ್ ಅವೇರನೆಸ್ ಕ್ಯಾಂಪ್‌ಗಳನ್ನು ಮಾಡುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ನಡೆಸುವ ಕ್ಲಿನಿಕ್ ಗೆ ಬೇರೆ ಜನರು ಬರುತ್ತಾರೆ ಎಂದರೆ ಸಾಕ್ಷಿಯು ಆ ಕ್ಲಿನಿಕ್ ಸುಮಾರು ದಿನಗಳಿಂದ ಬಂದ್ ಇರುವ ಕಾರಣ ಅಲ್ಲಿ ಯಾರು ಬರುವುದಿಲ್ಲ ಎಂದು ನುಡಿಯುತ್ತಾರೆ. ಆ ಎರಿಯಾದಲ್ಲಿ ಪ್ರತಿವಾದಿ ನಂ. 1 ಇವರು ಒಳ್ಳೆಯ ಡಾಕ್ಟರ್ ಎಂದು ಹೆಸರು ಮಾಡಿದ ಕಾರಣ ಅವರು ಚುನಾವಣೆಯಲ್ಲಿ ಅತಿ ಹೆಚ್ಚು ಮತಗಳಿಂದ ಆಯ್ಕೆಯಾಗಿ ಕಾರ್ಪೋರೆಟರ ಆಗಿರುತ್ತಾರೆ ಎಂದರೆ ಸರಿಯಲ್ಲ. ಓ ಎಸ್ ನಂ. 156/2012 ಇದರಲ್ಲಿ ಪ್ರತಿವಾದಿ ನಂ. 1 ಇವರನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ. ನನಗೆ ಪ್ರತಿವಾದಿ ನಂ. 1 ರವರಿಂದ ಯಾವುದೇ ಬಾಕಿ ಹಣ ಬರಬೇಕಾಗಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**